**ದಿನಾಂಕಃ 03–11–2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .**

**ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರರ ಪರ ಶ್ರೀ ಬಿ ಕೆ ವಕೀಲರಿಂದಃ**

1. ನನಗೆ ಒಟ್ಟು ಮೂರು ಜನ ಮಕ್ಕಳಿರುತ್ತಾರೆ. ಮೊದಲನೆ ಮಗ ತಿಪ್ಪೇಶಪ್ಪ ಏನು ಕೆಲಸ ಮಾಡುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. 2 ನೇ ಮಗ ಮಹಂತೇಶ ಆಟೋ ಚಲಾಯಿಸುತ್ತಾನೆ. ಮೂರನೇ ಮಗ ದುರ್ಗಪ್ಪ ಕೂಲಿ ಕೆಲಸ ಮಾಡುತ್ತಾನೆ. ಮಹಂತೇಶ ದಾವಣಗೆರೆಯಲ್ಲಿ ಇರುತ್ತಾನೆ. ಇನ್ನಿಬ್ಬರು ಮಕ್ಕಳು ತುಮ್ಮಿನಕಟ್ಟೆಯಲ್ಲಿರುತ್ತಾರೆ. 1 ಮತ್ತು 2 ನೇ ಎದುರುದಾರರಿಗೆ ಮದುವೆಯಾಗಿರುತ್ತದೆ. 3 ನೇ ಎದುರುದಾರನಿಗೆ ಮದುವೆಯಾಗಿರುವುದಿಲ್ಲ. 1 ನೇ ಎದುರುದಾರನಿಗೆ ಇಬ್ಬರು ಮಕ್ಕಳು ಇದ್ದು, ತಿಪ್ಪೇಶಪ್ಪನ ಮಗ ನೌಕರಿ ಮಾಡುತ್ತಾನೆ. ತಿಪ್ಪೇಶಪ್ಪನ ಮಗ ಐಟಿಐ ಮಾಡುತ್ತಿದ್ದಾನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಮಗಳನ್ನು ಮದುವೆ ಮಾಡಿ ಕೊಟ್ಟಿರುತ್ತಾನೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 2 ನೇ ಎದುರುದಾರರ ಮಕ್ಕಳು ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿರುವುದಿಲ್ಲ. 2 ನೇ ಎದುರುದಾರರ ಮಗ ಮತ್ತು ಮಗಳು ಪಿಯುಸಿ ಮತ್ತು 8 ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

2. 1 ಮತ್ತು 2 ನೇ ಎದುರುದಾರರು ಮನೆ ಬಿಟ್ಟು ಹೋಗಿ ಸುಮಾರು 20 ವರ್ಷ ಆಗಿರುತ್ತದೆ. ನಾನು 1 ಮತ್ತು 2 ನೆ ಎದುರುದಾರರ ಮನೆಗೆ ಯಾವತ್ತೂ ಹೋಗಿಯೇ ಇಲ್ಲ. ಈ ಅರ್ಜಿ ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. 2 ನೇ ಎದುರುದಾರರು ಎಲ್ಲಿ ವಾಸವಾಗಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಕೇರಿಯವರು ಹೇಳಿದ ಆಧಾರದ ಮೇಲೆ ನಾನು 2 ನೇ ಎದುರುದಾರರ ವಿಳಾಸ ತೋರಿಸಿರುತ್ತೇನೆ. ದುರ್ಗಪ್ಪನಿಗೆ ಮದುವೆಯಾಗಿರುವುದಿಲ್ಲ, ಅವಾಗವಾಗ ಮನೆಗೆ ಬಂದು ಊಟ ಮಾಡಿಕೊಂಡು ಹೋಗುತ್ತಾನೆ. 8 ರಿಂದ 10 ವರ್ಷಗಳಿಂದ ಆ ರೀತಿ ಮಾಡುತ್ತಿದ್ದಾನೆ. ಅವನು ಎಲ್ಲಿ ವಾಸವಾಗಿರುತ್ತಾನೆ ಎಂದು ಗೊತ್ತಿರುವುದಿಲ್ಲ. ನಾನು ಮತ್ತು 3 ನೇ ಎದುರುದಾರರು ಜೊತೆಯಾಗಿ ವಾಸವಾಗಿರುತ್ತೇವೆ ಎಂದರೆ ಸರಿಯಲ್ಲ.

3. ನನ್ನ ಗಂಡನ ಹೆಸರು ಹನುಮಂತಪ್ಪ ಕೋಗಳಿ ಎಂದರೆ ಸರಿ. ನನ್ನ ಗಂಡ ಸುಮಾರು 10 ವರ್ಷಗಳಿಂದ ಕಾಣೆಯಾಗಿರುತ್ತಾರೆ. ಎಲ್ಲಿ ಇದ್ದಾರೆ ಎಂದು ಗೊತ್ತಿರುವುದಿಲ್ಲ. ನನ್ನ ಗಂಡ ಕಾಣೆಯಾಗಿದ್ದಾರೆ ಎಂದು ನಾನಾಗಲಿ, ನನ್ನ ಮಕ್ಕಳಾಗಲಿ ಪೋಲಿಸ್ ಠಾಣೆಗೆ ಹೋಗಿ ದೂರು ಕೊಟ್ಟಿರುವುದಿಲ್ಲ. 1 ನೇ ಎದುರುದಾರರು ನನ್ನ ಮೇಲೆ ಹಲ್ಲೆ ಮಾಡಿದ್ದರಿಂದ ನಾನು ಪೋಲಿಸ್ ಠಾಣೆಗೆ ಹೋಗಿದ್ದೆನು. ಪೋಲಿಸ್ ಠಾಣೆಗೆ ನಾನೊಬ್ಬಳೇ ಹೋಗಿದ್ದೆನು. 1 ನೇ ಎದುರುದಾರರಿಗೆ ಮನೆ ಬರೆದುಕೊಡಿ ಎಂದು ನಾನು ಮತ್ತು 3 ನೇ ಎದುರುದಾರರು ತುಮ್ಮಿನಕಟ್ಟಿ ಪೋಲಿಸ್ ಠಾಣೆಗೆ ಹೋಗಿದ್ದೆವು ನಂತರ ಹಲಗೇರಿ ಪೋಲಿಸ್ ಠಾಣೆಗೆ ಹೋಗಿದ್ದೆವು ಎಂದರೆ ಸರಿ. ಪೋಲಿಸರು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಎಂದು ಹೇಳಿದ್ದರು. ನಾನು 3 ನೇ ಎದುರುದಾರರ ಜೊತೆ ನ್ಯಾಯಾಲಯಕ್ಕೆ ಬರುತ್ತೇನೆ.

4. ರೇಶನ್ ಕಾರ್ಡನಲ್ಲಿ ನನ್ನ ಮತ್ತು 3 ನೇ ಎದುರುದಾರನ ಹೆಸರು ಮಾತ್ರ ಇರುತ್ತದೆ. ನಾನು 3 ನೇ ಎದುರುದಾರನ ಮಾತು ಕೇಳಿ 1 ಮತ್ತು 2 ನೇ ಎದುರುದಾರರ ವಿರುದ್ಧ ಸುಳ್ಳು ಕೇಸ್ ಹಾಕಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರ ಕುಡಿದು ಬಂದು ನನಗೆ ಹಲ್ಲೆ ಮಾಡುತ್ತಿದ್ದ. 2 ನೇ ಎದುರುದಾರರು ಯಾವುದೇ ಮದ್ಯಸೇವನೆ ಮಾಡುವುದಿಲ್ಲ. 3 ನೇ ಎದುರುದಾರರಿಗೆ 40 ವರ್ಷ ವಯಸ್ಸಾಗಿರುತ್ತದೆ. 1 ಮತ್ತು 2 ನೇ ಎದುರುದಾರರು ಆತನಿಗೆ ಮದುವೆ ಮಾಡಿರುವುದಿಲ್ಲ. 1 ನೇ ಎದುರುದಾರರಿಗೆ ನಾನೇ 3 ನೆ ಎದುರುದಾರರಿಗೆ ಒಂದು ಹುಡುಗಿ ಹುಡುಕಿ ಎಂದು ಹೇಳಿದ್ದೆನು. ನನಗೆ ಈಗ 78 ವರ್ಷ ಎಂದರೆ ಸರಿ. ನನಗೆ ವೃದ್ಧಾಪ್ಯ ವೇತನ ಬರುತ್ತದೆ ಆದರೆ ಈಗ 3 ತಿಂಗಳಿಂದ ಬಂದಿರುವುದಿಲ್ಲ. ದುರ್ಗಪ್ಪ ವ್ಯಾಪಾರ ಮಾಡುತ್ತಿದ್ದು, ಅದರಿಂದಲೇ ನಾನು ಜೀವನ ಮಾಡುತ್ತಿದ್ದೇನೆ ಎಂದರೆ ಸಾಕ್ಷಿ ಮೊದಲು ವ್ಯಾಪಾರ ಮಾಡುತ್ತಿದ್ದ ಈಗ ವ್ಯಾಪಾರ ಮಾಡುವುದಿಲ್ಲ ಎಂದು ಹೇಳುತ್ತಾರೆ.

5. ಈ ಕೇಸ್ ಹಾಕುವ ಪೂರ್ವದಲ್ಲಿ ನನಗೆ ಜೀವನಾಂಶ ಕೊಡಿ ಎಂದು ನಾನು 1 ಮತ್ತು 2

ನೇ ಎದುರುದಾರರ ಬಳಿ ಕೇಳಿದ್ದೆನು. ನಾನು ಎಷ್ಟು ಹಣ ಬೇಕು ಎಂದು ಕೇಳಿರುವುದಿಲ್ಲ ಆದರೆ ಜೀವನಾಂಶ ಬೇಕು ಎಂದು ಕೇಳಿದ್ದೆನು. ಆ ಬಗ್ಗೆ ಯಾವುದೇ ಪಂಚಾಯಿತಿ ಆಗಿರುವುದಿಲ್ಲ. 3 ನೇ ಎದುರುದಾರ ಆಗಾಗ ನನಗೆ ಸ್ವಲ್ಪ ಹಣ ಕೊಡುತ್ತಿದ್ದನು. ಈ ದಿನ 3 ನೇ ಎದುರುದಾರ ನನ್ನ ಜೊತೆ ನ್ಯಾಯಾಲಯಕ್ಕೆ ಬಂದಿರುತ್ತಾರೆ. ಆದರೆ ನ್ಯಾಯಾಲಯದ ಹೊರಗೆ ಇರುತ್ತಾನೆ. ಅವನ ಜೊತೆಗೆ ದಿನಾಲೂ ನಾನು ನ್ಯಾಯಾಲಯಕ್ಕೆ ಬರುತ್ತೇನೆ ಎಂದರೆ ಸರಿ . ಈಗಲೂ ಸಹ 1 ಮತ್ತು 2 ನೇ ಎದುರುದಾರರು ನನ್ನನ್ನು ನೋಡಿಕೊಳ್ಳಲು ತಯಾರಿರುತ್ತಾರೆ ಎಂದರೆ ಸಾಕ್ಷಿ ನಾನು ಅವರ ಮನೆಗೆ ಹೋಗುವುದಿಲ್ಲ ಎಂದು ಹೇಳುತ್ತಾರೆ. 1 ನೇ ಎದುರುದಾರ, ಅವರ ಹೆಂಡತಿ ಮತ್ತು ಮಕ್ಕಳು ನನಗೆ ಹೊಡೆದಿರುತ್ತಾರೆ. 1 ಮತ್ತು 2 ನೇ ಎದುರುದಾರರಿಂದ ಮನೆ ಬರೆಯಿಸಿಕೊಳ್ಳಬೇಕು ಎಂದು 3 ನೇ ಎದುರುದಾರನ ಪ್ರಚೋದನೆಯ ಮೇರೆಗೆ ಈ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರ ತಯಾರಿಸಲು ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಊರಿನ ಜನರು ನನಗೆ ಈ ರೀತಿ ಅರ್ಜಿ ಹಾಕು ಎಂದು ಹೇಳಿದ್ದರಿಂದ ಅರ್ಜಿ ಹಾಕಿರುತ್ತೇನೆ ಎಂದು ಹೇಳುತ್ತಾರೆ.

6. 1 ಮತ್ತು 2 ನೇ ಎದುರುದಾರರು ಏನು ತಕರಾರು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನನ್ನು 1 ಮತ್ತು 2 ನೇ ಎದುರುದಾರರು ತಮ್ಮ ಮನೆಯಲ್ಲಿ ಇಟ್ಟುಕೊಂಡು ನೋಡಿಕೊಳ್ಳಲು ತಯಾರಿದ್ದೇವೆ ಎಂದು ತಮ್ಮ ತಕರಾರಿನಲ್ಲಿ ಹೇಳಿರುತ್ತಾರೆ ಎಂದರೆ ಸಾಕ್ಷಿ ನಾನು ಅವರ ಮನೆಗೆ ಹೋಗುವುದಿಲ್ಲ ಎಂದು ಹೇಳುತ್ತಾರೆ. ನಾನು ಪ್ರತಿಯೊಬ್ಬ ಎದುರುದಾರರಿಂದ ರೂ.3000/‍– ರೂಪಾಯಿ ಜೀವನಾಂಶ ಕೇಳಿರುತ್ತೇನೆ. ನಾನು 3 ನೇ ಎದುರುದಾರ ಮಾತು ಕೇಳಿ ಸುಳ್ಳು ಅರ್ಜಿ ಸಲ್ಲಿಸಿರುವುದರಿಂದ ಯಾವುದೇ ಜೀವನಾಂಶದ ಆದೇಶಕ್ಕೆ ಯೋಗ್ಯಳಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಎದುರುದಾರರು ಈಗಲೂ ಸಹ ನನ್ನನ್ನು ನೋಡಿಕೊಳ್ಳಲು ತಯಾರಿದ್ದರೂ ಸಹ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಎದುರುದಾರರ ಪರ ವಕೀಲರುಃ** ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/–

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.